ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂ: 1 ಪಿ ಡಬ್ಲ್ಯೂ ಃ 1**

ಸಾಕ್ಷಿಯ ಹೆಸರು ಃ ಮೌನೇಶ ಹುಲ್ ಬಜಾರ್

ತಂದೆಯ ಹೆಸರು ಃ ಗಣಪತಿ.

ವಯಸ್ಸು ಃ 47 ವರ್ಷ

ಉದ್ಯೋಗ ಃ ಅಕ್ಕಸಾಲಿಗ.

ವಾಸಸ್ಥಳ ಃ ಲಕ್ಷ್ಮೇಶ್ವರ, ತಾಃ ಲಕ್ಷ್ಮೇಶ್ವರ.

ದಿನಾಂಕಃ 04/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಚಾಸಾ 4 ನನ್ನ ಅತ್ತಿಗೆ. ಚಾಸಾ 5 ನನ್ನ ಮಾವ. ಚಾಸಾ 6 ರ ಪರಿಚಯವಿದೆ. ಮೃತ ಪ್ರಕಾಶ ಗಣಪತಿ ನನ್ನ ಅಣ್ಣ. 1 ನೇ ಆರೋಪಿ ನೋಡಿದ್ದೀರಾ ಎಂದರೆ ಇಲ್ಲ. ಹೆಸರು ಕೇಳಿದ್ದೇನೆ. ದಿಃ 25-06-2025 ರಂದು ಬೆಳಿಗ್ಗೆ 09-00 ಗಂಟೆಗೆ ಮನೆ ಬಿಟ್ಟು ಛಬ್ಬಿ ಗಣಪತಿ ದೇವಸ್ಥಾನಕ್ಕೆ ಪಲ್ಸರ್ ಬೈಕ ನಂಬರ ಕೆಎ-26-ಇ-7184 ನ್ನು ತೆಗೆದುಕೊಂಡು ಅಲ್ಲಿಗೆ ಹೋಗಿದ್ದ. ಕುಂದಗೋಳದ ಅಕ್ಷಯ ಗ್ಯಾಸ್ ಗೋಡೌನ್ ಬಳಿ ಹೋಗುತ್ತಿದ್ದಾಗ ಕುಂದಗೋಳದಿಂದ ಗ್ಯಾಸ್ ಗೋಡೌನ್ ಗೆ ಹೋಗುತ್ತಿದ್ದ ಬುಲೋರೋ ವಾಹನ ಕೆಎ-25-ಡಿ-7212 ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಗೋಡೌನ್ ಗೆ ಬಲ ತಿರುವು ತೆಗೆದುಕೊಳ್ಳುವಾಗ ನನ್ನ ಅಣ್ಣನ ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದು, ಬೈಕ್ ಕೆಳಗೆ ಬಿದ್ದಾಗ ನನ್ನ ಅಣ್ಣನ ತಲೆಗೆ ಭಾರಿ ಪೆಟ್ಟು ಬಿದ್ದಿದ್ದು, ಚಾಸಾ 6 ನನಗೆ ಕರೆ ಮಾಡಿ ಅಪಘಾತದ ವಿಚಾರ ತಿಳಿಸಿದ್ದು, ನಾನು ಚಾಸಾ 5 ಅವರನ್ನು ಕರೆದುಕೊಂಡು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿದ್ದೇವು. ನಾವು ಕಿಮ್ಸ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಆತ ಮೃತ ಪಟ್ಟಿದ್ದ, ಅಲ್ಲಿದ್ದವನ್ನು ಕೇಳಿದಾಗ ಕುಂದಗೋಳ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಕರೆ ತಂದಾಗ ಮೃತ ಪಟ್ಟಿದ್ದಾಗಿ ಹೇಳಿದ. ಅಪಘಾತವಾದಾಗ ಮಃ 01-45 ಆಗಿತ್ತು. ಅದೇ ದಿನ ಕುಂದಗೋಳ ಪೋಲೀಸ್ ಠಾಣೆಗೆ ಬಂದು ಸಂಜೆ 06-00 ಗಂಟೆಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ಶವ ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರದಲ್ಲಿ ನಾನು ಹಾಜರಿದ್ದು,

ಸದರಿ ಭಾವ ಚಿತ್ರವನ್ನು ನಿಪಿ. 2 ಎಂದು ಗುರುತಿಸಲಾಯಿತು. ಸಾಕ್ಷಿ ಮತ್ತೊಂದು ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಅಪಘಾತವಾದ ಮಾರನೇ ದಿನ ಅಪಘಾತ ಸ್ಥಳದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ 2 ಮತ್ತು 3 ಎಂದು, ಸದರಿ ದಾಖಲೆಯನ್ನು ನಿಪಿ. 3 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಬುಲೋರೋ ವಾಹನ ಮತ್ತು ಪಲ್ಸರ್ ಮೋಟಾರ್ ಸೈಕಲನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಆಗ ಸಮಯ 11-00 ರಿಂದ 11-45 ಆಗಿತ್ತು. ಮೂರು ಭಾವ ಚಿತ್ರಗಳಲ್ಲಿ ನಾನು ಇದ್ದು, ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆ. ಸದರಿ ಭಾವ ಚಿತ್ರಗಳನ್ನು ಒಟ್ಟಾಗಿ ನಿಪಿ. 4 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ಆರೋಪಿ ಬುಲೋರೋವನ್ನು ಕುಂದಗೋಳ ಕಡೆಯಿಂದ ಇಂಡೇನ್ ಗ್ಯಾಸ್ ಗೋಡೌನ್ ಕಡೆಗೆ ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದಾನೆ ಎಂದರೆ ಸರಿ. ಬೆಳಿಗ್ಗೆ 11-30 ರಿಂದ 12-15 ರ ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 14 ಅವರು ಪಂಚನಾಮೆ ಮಾಡಿ ಕಚ್ಚಾ ನಕಾಶೆಯನ್ನು ತಯಾರಿಸಿ ಓದಿ ಹೇಳಿದ ನಂತರ ನಿಪಿ. 3 ಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.